4

# ಆತನ ಸ್ವಯಂ - ತಿಳುವಳಿಕೆಯು ಭೂಲೋಕದ ಮೇಲೆ ಕುಮಾರನ ದೈವತ್ವವನ್ನು ಪ್ರತಿಬಿಂಬಿಸುತ್ತದೆ

ಯೇಸುವಿನ ದೈವತ್ವದ ಬಗ್ಗೆ ಪುರಾವೆಯ ಒಂದು ಕ್ಷೇತ್ರವು ಆತನ ದೈವಿಕ ತಿಳಿದಿರುವಿಕೆ ಆಗಿರುತ್ತದೆ. ಯೇಸುವಿನ ವೈಯಕ್ತಿಕ ಜೀವಿತದ ಬಗ್ಗೆ ನಮಗೆ ಯಾವ ಮಾಹಿತಿ ಇರದಿದ್ದರೂ ಸುವಾರ್ತೆಯ ದಾಖಲೆಗಳಲ್ಲಿ ನಮಗೆ ಕೊಡಲ್ಪಟ್ಟ ಅಂತರ್ ದೃಷ್ಟಿಗಳು ಆತನು ತನ್ನ ದೇವತ್ವದ ಬಗ್ಗೆ ಅರಿವುಳ್ಳವನಾಗಿದ್ದನು ಎಂಬುದನ್ನು ಉದಾಹರಿಸುತ್ತಾನೆ. ಆತನು ತನ್ನ ದೈವಿಕ ಸರ್ವಜ್ಞಾನವನ್ನೂ ಸರ್ವ ಶಕ್ತಿಯನ್ನೂ ತನ್ನ ಸೇವೆಯಲ್ಲಿ ಸಾಧನವನ್ನಾಗಿ ಉಪಯೋಗಿಸಿದನು. ಈಗಿನ ಹಾಗೂ ಭವಿಷ್ಯದ ಆಲೋಚನೆಗಳನ್ನೂ ಇತರರ ಕೃತ್ಯಗಳನ್ನೂ ಒಳಗೊಂಡು ವಿಮೋಚಕನಂತೆ ತನ್ನ ಪಾತ್ರವನ್ನು ಆತನು ನೆರವೇರಿಸುವಂತೆ ಸಂಭವಿಸುವಂಥದ್ದೆಲ್ಲವನ್ನೂ ಆತನು ತಿಳಿದವನಾಗಿದ್ದನು.

## ತಂದೆಯೊಂದಿಗಿನ ಆತನ ಸಂಬಂಧದ ಬಗ್ಗೆ ಆತನ ತಿಳುವಳಿಕೆ

ಬಾಲ್ಯ ಪ್ರಾಯದಿಂದ, ಸುಮಾರು *Bar Mitzvah* ವಯಸ್ಸಿನಿಂದ[1] ಯೇಸುವು ತನ್ನ ತಂದೆಯ ಯೋಜನೆಗಳಲ್ಲಿ ತನ್ನ ಪಾತ್ರದ ಬಗೆಗೆ ಅರಿವುಳ್ಳವನಾಗಿದ್ದನು. ಯೋಸೇಫ ಮತ್ತು ಮರಿಯಳು ಆತನನ್ನು ದೇವಾಲಯದಲ್ಲಿ ಕಂಡುಕೊಂಡಾಗ ಈ ಸಂಭಾಷಣೆ ನಡೆಯಿತು:

> ... "ಕಂದಾ, ನೀನು ನಮಗೆ ಯಾಕೆ ಹೀಗೆ ಮಾಡಿದಿ? ನಿನ್ನ ತಂದೆಯೂ ನಾನೂ ಎಷ್ಟೋ ತಳಮಳಗೊಂಡು ನಿನ್ನನ್ನು ಹುಡುಕಿ ಬಂದೆವಲ್ಲಾ ಎಂದು ಹೇಳಲು." ಆತನು ಅವರಿಗೆ, "ನೀವು ನನ್ನನ್ನು ಹುಡುಕಿದ್ದೇನು? ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೇ?" ಎಂದು ಉತ್ತರ ಕೊಟ್ಟನು (ಲೂಕ 2:48-50).

ಯೇಸುವು ಯೋಸೇಫನಿಗೆ ಸಂಬಂಧಿಸಿ ಹೇಳಲಿಲ್ಲ. "ನಿನ್ನ ತಂದೆ" ಎಂದು ಮರಿಯಳ ಮಾತಿಗೆ "ನನ್ನ ತಂದೆ" ಎಂಬ ತನ್ನ ಮಾತುಗಳನ್ನು ವಿರುದ್ಧವಾದ ರೀತಿಯಲ್ಲಿ ಹೇಳಿದನು, ಯೇಸುವು ತನ್ನ ಪರಲೋಕದ ತಂದೆಯೊಂದಿಗೆ ತನ್ನ ದೈವಿಕ ಸಂಬಂಧದ ತಿಳುವಳಿಕೆ ಇಲ್ಲದವನಾಗಿದ್ದನು ಎಂಬುದಕ್ಕೆ ಯಾವ ಪುರಾವೆಯೂ ಇರುವದಿಲ್ಲ. ಅದಕ್ಕೆ ಪ್ರತಿಯಾದದ್ದು ಇತ್ತು!

ಯೇಸುವಿನ ದೇವತ್ವದ ಬೆಳಕಿನಲ್ಲಿ ಈ ತಂದೆ/ಕುಮಾರನ ಸಂಬಂಧದ ಅರ್ಥ

ವೇನಾಗುತ್ತದೆ? ಇನ್ನೊಂದು ಕಡೆಯಲ್ಲಿ ಆತನು ಹೀಗೆ ಹೇಳಿದನು, "ನನ್ನ ತಂದೆಯು ಎಲ್ಲವನ್ನೂ ನನಗೆ ಒಪ್ಪಿಸಿದ್ದಾನೆ. ತಂದೆಯೇ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ; ಮಗನೇ ಹೊರತು ಇನ್ನಾವನು ತಂದೆಯನ್ನು ತಿಳಿದವನಲ್ಲ. ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿದ್ದಾನೆ" (ಮತ್ತಾಯ 11:27). ಇದು ಸಾರ್ವತ್ರಿಕವಾದ ("ಎಲ್ಲಾ ಸಂಗತಿಗಳು") ಹಾಗೂ ಪ್ರತ್ಯೇಕವಾದ ("ತಂದೆಯನ್ನು ಹೊರತು ಪಡಿಸಿ ... ಕುಮಾರನನ್ನು ಹೊರತು ಪಡಿಸಿ") ಒಪ್ಪಿಕೊಳ್ಳುವಿಕೆಯಾಗಿದೆ. ಈ ಅದ್ವಿತೀಯವಾದ ತಂದೆ/ಕುಮಾರನ ಸಂಬಂಧದ ಅರ್ಥವು ಅದು ನಿಜವಾದ, ದೈವಿಕ ಸಂಬಂಧವನ್ನು ಒಳಗೊಂಡಿರದಿದ್ದರೆ ಏನೂ ಆಗಿರುವದಿಲ್ಲ. ಕುಮಾರನೊಂದಿಗೆ ತಂದೆಯ ಈ ಸಂಬಂಧವು, ತಾನು ಆಯ್ದುಕೊಂಡ ಇತರರಿಗೆ ಕುಮಾರನು ತಂದೆಯನ್ನು ಪ್ರಕಟಿಸಲು ಶಕ್ತನನ್ನಾಗಿ ಮಾಡುತ್ತದೆ.[2]

"ದೈವಿಕ ಕಾರ್ಯತತ್ಪರತೆ" ಯೇಸು ತನ್ನ ಶಿಷ್ಯರಿಗೆ ಮಾಡಿದ ಕೆಲವು ಸೂಚನೆಗಳ ಹಿಂದಿರುತ್ತದೆ. ಉದಾಹರಣೆಯಾಗಿ, ಯೇಸು ತನಗೆ ಪ್ರಶ್ನಿಸಿದ ಥೋಮ ನಿಗೆ ತಾನು ತಂದೆಯ ಬಳಿಗೆ ಏಕೈಕ ಮಾರ್ಗವಾಗಿದ್ದೇನೆಂದು (ಹಾಗೂ ಇರುತ್ತೇನೆ ಎಂದು) ತಿಳಿಸಿದನು. ಅದರಿಂದ ಫಿಲಿಪ್ಪನು ತಾನು ತಂದೆಯನ್ನು ನೋಡಬೇಕೆಂದು ಕೇಳಿ ಕೊಂಡನು. ಯೇಸುವಿನ ಉತ್ತರವು ತನ್ನ ಗುರುತಿಸುವಿಕೆಯ ಬಗ್ಗೆ ತನಗಿದ್ದ ತಿಳುವಳಿಕೆಯ ಬಗ್ಗೆ ಅದ್ಭುತಕರವಾದ ಉದಾಹರಣೆಯನ್ನು ಕೊಟ್ಟನು:

> ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ. "ನಮಗೆ ತಂದೆಯನ್ನು ತೋರಿಸು" ಎಂದು ನೀನು ಹೇಳುವುದು ಹೇಗೆ? ನಾನು ತಂದೆಯಲ್ಲಿದ್ದೇನೆ, ತಂದೆಯು ನನ್ನಲ್ಲಿದ್ದಾನೆ ಎಂದು ನೀನು ನಂಬುವದಿಲ್ಲವೋ? ನಾನು ನಿಮಗೆ ಹೇಳುವ ಮಾತುಗಳನ್ನು ನನ್ನಷ್ಟಕ್ಕೆ ನಾನೇ ಆಡುವುದಿಲ್ಲ; ನನ್ನಲ್ಲಿರುವ ತಂದಯೇ ತನ್ನ ಕ್ರಿಯೆಗಳನ್ನು ಮಾಡುತ್ತಾನೆ ನಾನು ತಂದೆಯಲ್ಲಿಯೂ ತಂದೆಯು ನನ್ನಲ್ಲಿಯೂ ಇದ್ದಾನೆಂದು ನೀವು ನನ್ನನ್ನು ನಂಬಿರಿ (ಯೋಹಾನ 14:9ಬಿ-11ಎ).

ಆತನು ತಾನು ತಂದೆಯಾಗಿರುವದಿಲ್ಲ ಎಂಬುದನ್ನು ತಿಳಿದವನಾಗಿದ್ದನು. ಆತನು ತಂದೆಯ ಕುಮಾರನು ಎಂಬುದನ್ನು ತಿಳಿದಿದ್ದನು. ಇಬ್ಬರೂ ಬಹಳ ನಿಕಟವಾಗಿ ಸಂಬಂಧಿಸಿದ್ದಾರೆ. ಒಬ್ಬನನ್ನು ನೋಡುವುದು ಇನ್ನೊಬ್ಬನನ್ನು ನೋಡುವಂತೆ, ಒಬ್ಬನನ್ನು ಕೇಳುವುದು ಇನ್ನೊಬ್ಬನನ್ನು ಕೇಳುವಂತೆ ಇರುತ್ತದೆ.

ತಾವು ಪರಸ್ಪರ ಒಬ್ಬರನ್ನೊಬ್ಬರು ತಿಳಿದಿರುವದರಿಂದ ತಂದೆಯು ಮಾಡುವಂಥದ್ದನ್ನು ಕುಮಾರನು ಮಾಡುವಂಥದ್ದಾಗಿದೆ ಎಂದು ಹೇಳುವಲ್ಲಿ ಇನ್ನೊಂದು ಸಮಯದಲ್ಲಿ ಯೇಸುವು ಮುಂದೆ ಹೋದನು. ಜೀವ ಹಾಗೂ ನ್ಯಾಯ ತೀರ್ವಿಕೆಯು ತಂದೆಯಿಂದ ಕುಮಾರನಿಗೆ ಒಪ್ಪಿಸಲ್ಪಟ್ಟಿವೆ; ಆದುದರಿಂದ ತಂದೆ ಹಾಗೂ ಕುಮಾರ ಇಬ್ಬರೂ ಗೌರವಿಸಲ್ಪಡಬೇಕು:

> ಅದಕ್ಕೆ ಯೇಸು ಅವರಿಗೆ, "ನಿನಗೆ ನಿಜವಾಗಿ ಹೇಳುತ್ತೇನೆ, ತಂದೆಯು ಮಾಡುವದನ್ನು ಕಂಡು ಮಗನು ಮಾಡುತ್ತಾನೆ, ಹೊರತು ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು; ಆತನು ಮಾಡುವದನ್ನೆಲ್ಲಾ ಹಾಗೆಯೇ ಮಗನೂ ಮಾಡುತ್ತಾನೆ. ತಂದೆಯು ಮಗನ ಮೇಲೆ ಮಮತೆಯಿಟ್ಟು ತಾನು

ಮಾಡುವವುಗಳನ್ನೆಲ್ಲಾ ಅವನಿಗೆ ತೋರಿಸುತ್ತಾನೆ. ಇದಲ್ಲದೆ ಇವುಗಳಿಗಿಂತ ದೊಡ್ಡ ಕೆಲಸಗಳನ್ನು ಅವನಿಗೆ ತೋರಿಸುವನು; ಅವುಗಳನ್ನು ನೋಡಿ ನಿಮಗೆ ಆಶ್ಚರ್ಯವಾಗುವದು. ತಂದೆಯು ಹೇಗೆ ಸತ್ತವರನ್ನು ಎಬ್ಬಿಸಿ ಬದುಕಿಸುತ್ತಾನೆ ಹಾಗೆಯೇ ಕುಮಾರನೂ ಸಹ ತನಗೆ ಬೇಕಾದವರನ್ನು ಬದುಕಿಸುತ್ತಾನೆಂದು ತಿಳುಕೊಳ್ಳಿರಿ ..." (ಯೋಹಾನ 5:19-23).

ತನ್ನ ತಂದೆಯೊಂದಿಗಿನ ತನ್ನ ಸಂಬಂಧದ ಬಗ್ಗೆ ಯೇಸುವಿನ ತಿಳುವಳಿಕೆಯು ತನ್ನ ತಂದೆಯು ಇರುವಂತೆಯೇ ತಾನೂ ದೇವರಾಗಿದ್ದನು (ಆಗಿರುತ್ತಾನೆ) ಎಂಬ ತಳಹದಿಯ ಮೇಲೆ ನಿಂತು ಕೊಂಡಿರುತ್ತದೆ.

## ಆತನ ದೈವಿಕ ಜ್ಞಾನದ ಬಗ್ಗೆ ಆತನ ತಿಳುವಳಿಕೆ

ಮಾನವ ಸಾಮರ್ಥ್ಯವನ್ನು ದಾಟಿ ಯೇಸುವಿಗಿದ್ದ ಜ್ಞಾನವನ್ನು ಕುರಿತು ಯೋಚಿಸ ಬೇಕಾದ ಇನ್ನೊಂದು ಕ್ಷೇತ್ರವಾಗಿದೆ. ಇದು ಸುವಾರ್ತೆಯ ದಾಖಲೆಗಳಲ್ಲಿ ಬಹಳ ಸಲ ಸಂಭವಿಸಿರುತ್ತದೆ. ಅದು ಬಹಳ ಸಲ ಬರುವದರಿಂದ ಅದು ಸುಲಭವಾಗಿ ಕಡೆಗಾಣಿಸಲ್ಪಡುತ್ತದೆ.

ಮಾರ್ಕನ ಸುವಾರ್ತೆಯಿಂದ ತೆಗೆದು ಕೊಳ್ಳಲ್ಪಟ್ಟ ಹಲವಾರು ಉದಾಹರಣೆಗಳನ್ನು ಗಮನಿಸೋಣ. (1) ನಾಲ್ಕು ಜನರಿಂದ ತನ್ನ ಬಳಿಗೆ ತರಲ್ಪಟ್ಟ ಪಾರ್ಶ್ವವಾಯು ರೋಗಿಯನ್ನು ಯೇಸು ಗುಣಪಡಿಸಿದನು. ಆಗ ಅಲ್ಲಿ ಮೋಶೆಯ ಧರ್ಮಶಾಸ್ತ್ರದ ಬೋಧಕರು ಮಾತಾಡುವದಕ್ಕಿಂತ ಮುಂಚಿತವಾಗಿಯೇ ಅವರು ಯೋಚಿಸುತ್ತಿದ್ದುದನ್ನು ಆತನು ತಿಳಿದಿದ್ದನು ಎಂದು ಮಾರ್ಕ 2:8 ಹೇಳುತ್ತದೆ. (2) ಯೇಸು ತಾನು ಹಿರಿಯರಿಂದಲೂ ಪ್ರಧಾನ ಯಾಜಕರಿಂದಲೂ, ಧರ್ಮಶಾಸ್ತ್ರ ಬೋಧಕರಿಂದಲೂ ತಿರಸ್ಕರಿಸಲ್ಪಡುವೆನೆಂದು ತನ್ನ ಶಿಷ್ಯರಿಗೆ ಬೋಧಿಸಲು ಪ್ರಾರಂಭಿಸಿದನು. ಆತನು ಕೊಲ್ಲಲ್ಪಟ್ಟು, ಮೂರು ದಿನದ ಮೇಲೆ ಜೀವಿತನಾಗಿ ಎದ್ದು ಬರುವನು (8:31; 9:9, 31; 10:33, 34). (3) ಆತನು ತನ್ನ ಸಮಕಾಲೀನರಲ್ಲಿ ಕೆಲವರು ದೇವರ ರಾಜ್ಯವು ಬಲದೊಂದಿಗೆ ಬರುವದನ್ನು ನೋಡುವವರೆಗೆ ಇನ್ನೂ ಜೀವಿಸುವರೆಂದು ಆತನು ಮುಂತಿಳಿಸಿದನು (9:1). (4) ತನ್ನ ಅಪೊಸ್ತಲರಲ್ಲಿ ಕೆಲವರು ಹಿಂಸೆಯನ್ನು ಮತ್ತು ಮರಣದ ಬಗ್ಗೆ ಹೇಳಿದನು (10:39). (5) ತನ್ನ ಸೇವೆಯ ಮೇಲೆ ಪರಿಣಾಮ ಮಾಡುವ ಸಮಯದ ಬಗ್ಗೆ ಕಾಲಕ್ಕಿಂತ ಮೊದಲೇ ಆತನು ತಿಳಿದಿದ್ದನು (11:2-6). (6) ಯೇಸುವು ಪ್ರಶ್ನಿಸಲ್ಪಟ್ಟಾಗ, ಆತನ ಉತ್ತರವು ಪ್ರಶ್ನೆ ಕೇಳಿದವರ ಆಂತರಿಕ ಯೋಚನೆಗಳ ಹಾಗೂ ಮನೋಭಾವನೆಯ ಮೇಲೆ ಅವಲಂಬಿಸಿರುತ್ತಿತ್ತೆಂದು ಹೇಳಲ್ಪಟ್ಟಿದೆ (12:13-17). (7) ಬರಲಿಕ್ಕಿದ್ದ ದೇವಾಲಯದ ನಾಶನ ಹಾಗೂ ಅನಂತರ ಬರುವ ಅವಘಡದ ಬಗ್ಗೆ ಯೇಸುವು ಸ್ಪಷ್ಟವಾಗಿ ವಿವರಿಸಿದನು (13:1-23). (8) ಯೂದನು ತನ್ನನ್ನು ಹಿಡಿದುಕೊಡುವನು, ಪೇತ್ರನು ತನ್ನನ್ನು ಮೂರು ಸಲ ಅಲ್ಲಗಳೆಯುವನು ಹಾಗೂ ಎಲ್ಲಾ ಅಪೊಸ್ತಲರು "ಬಿಟ್ಟು ಹೋಗುವರು" ಎಂದು ಆತನು ತಿಳಿದಿದ್ದನು (14:17-21, 27, 30).

ಕೇವಲ ಮಾನವ ಸಾಮರ್ಥ್ಯವನ್ನು ದಾಟಿ ಯೇಸು ಹೊಂದಿಕೊಂಡ ಜ್ಞಾನವು ಪ್ರವಾದಿಗಳು ತಮ್ಮ ಮುಂತಿಳಿಸುವಿಕೆಯನ್ನು ಹೇಳಿದ್ದಕ್ಕಿಂತ ಹೆಚ್ಚಾದದ್ದಾಗಿರಲಿಲ್ಲ ಎಂಬ ಸ್ಥಾನ ನಾವು ತೆಗೆದು ಕೊಳ್ಳಬಹುದು. ಯೇಸುವಿನ ಅಲೌಕಿಕ ಜ್ಞಾನವು - ಆತನ ಸರ್ವಜ್ಞಾನವು - ಕೇವಲ ಪ್ರವಾದಿಕವಾದದ್ದಾಗಿರದೇ ಆತನ ದೈವತ್ವದ ತಪ್ಪಿಸಲಾಗದ

ಪರಿಣಾಮವಾಗಿತ್ತು. "ತಂದೆಗೆ ಇರುವದೆಲ್ಲಾ ನನ್ನದು; ಆದುದರಿಂದಲೇ ನನ್ನದರೊಳಗಿಂದ ತೆಗೆದು ಕೊಂಡು ನಿಮಗೆ ತಿಳಿಸುವನೆಂದು ಹೇಳಿದೆನು" (ಯೋಹಾನ 16:15; ಇವುಗಳನ್ನು ನೋಡಿರಿ ಯೋಹಾನ 16:30, 17:10; 21:17; ಇತ್ಯಾದಿ).

ಯೇಸು ತನ್ನ ಬಗ್ಗೆ ಎಷ್ಟು ಪೂರ್ಣವಾಗಿ ತಿಳುವಳಿಕೆಯುಳ್ಳವನಾಗಿದ್ದನೆಂಬುದನ್ನು ಗಮನಿಸಲು ನಾವು ಸಿದ್ಧರಾಗಿರುವೆವು. ಯೇಸು ದೇವರ ಕುಮಾರನು ಹಾಗೂ (ಮೆಸ್ಸೀಯನಾಗಿ) ಆಯ್ಕೆಯಾದವನು ಎಂಬ ತನ್ನ ತಾದಾತ್ಮ್ಯವನ್ನು ತಿಳಿದುಕೊಂಡಿದ್ದನು ಎಂಬುದನ್ನು ನಾವು ಆಗಲೇ ನೋಡಿದ್ದೇವೆ. ಆತನು ತನ್ನ ಮೆಸ್ಸೀಯತ್ವವನ್ನು ಮತ್ತು ಕುಮಾರತ್ವವನ್ನು ಎಷ್ಟು ಸಲ ಹಿನ್ನೆಲೆಯಲ್ಲಿಟ್ಟಿದ್ದನು ಎಂಬುದನ್ನು ನಾವು ನೋಡಿದ್ದೇವೆ (ಮಾರ್ಕ 8:30; ಮತ್ತಾಯ 16:20). ಜಾಗರೂಕತೆಯುಳ್ಳ "ವೇಳಾಪಟ್ಟಿ" ಅನುಗುಣವಾಗಿ ತನ್ನ ಗುರುತನ್ನು ಪ್ರಕಟಿಸುತ್ತ - ಆತನು ಹೇಗೆ ಹೋದನೆಂಬುದನ್ನು ಮುಂದೆ ನಾವು ನೋಡುತ್ತೇವೆ.

---

ಟಿಪ್ಪಣಿಗಳು

[1]Milton Steinberg, *Basic Judasim* (New York: Harcourt, Brace & World, 1947), 133. *Bar Mitzvah* ಎಂಬುದು ಯೆಹೂದಿ ಗಂಡು ಮಕ್ಕಳಿಗೆ ಹದಿಮೂರನೆಯ ವಯಸ್ಸಿನಲ್ಲಿ ಧಾರ್ಮಿಕ ಪ್ರೌಢಾವಸ್ಥೆಗೆ ಸೇರುವುದಾಗಿತ್ತು. "Son of Commandments" ಎಂಬ ಮಾತು ಯುವಕರಿಗೆ ಇಲ್ಲವೇ ಈ ಸಂಸ್ಕಾರ ಆಚರಣೆಗೆ ಸಂಬಂಧಿಸಿತು. [2]Cf. G. E. Ladd, *A Theology of the New Testament* (Grand Rapids, Mich.: Wm. B. Eerdmans Publishing Co., 1974), 166-67. ಮತ್ತಾಯ 11:27ನ್ನು ಕುರಿತು Ladd ಹೀಗೆ ಹೇಳುತ್ತಾರೆ "ಯೇಸುವು ತಂದೆಯನ್ನು ತಿಳಿದಿರುವನು. ... ಆದುದರಿಂದ ಇದು ದೈವಿಕ ಜ್ಞಾನದ ಮಟ್ಟದ ಮೇಲೆ ಇರುವುದು."

---

## ಇತರರು ಯೇಸುವನ್ನು ದೇವರಂತೆ ನೋಡಿದರೋ

ಯೇಸು ತನ್ನ ಸ್ವಂತ - ಪರಿಚಯವನ್ನು ತಿಳಿದ್ದನು. ಯೇಸುವಿನಿಂದಲೂ ಇತರರಿಂದಲೂ ಅರಿಕೆ ಮಾಡುವದನ್ನು ಅಪೊಸ್ತಲರು ಕೇಳಿಸಿಕೊಂಡಿದ್ದರು, ನಾವು ಹೆಚ್ಚಿನ ಉತ್ತಮವಾದ ಸ್ಥಿತಿಯಲ್ಲಿದ್ದೇವೆ. ಯೇಸುವಿನ ಪೂರ್ಣ ಚರಿತ್ರೆಯನ್ನು ನಾವು ಕೇಳಿದ್ದೇವೆ. ಪರಿಶುದ್ಧ ಬಹರಗಳ ಪೂರ್ಣ ಪ್ರಕಟನೆಯನ್ನು ನಾವು ಓದಿದ್ದೇವೆ. ಅಧ್ಭುತಕರವಾದ ಬೈಬಲಿನಲ್ಲಿಯ ಅಂತ್ಯ ಸಂಗತಿಗಳನ್ನು ತಿಳಿದಿದ್ದೇವೆ ಹಾಗೂ ನಿರೀಕ್ಷಿಸುತ್ತಿದ್ದೇವೆ.

ಒಂದು ಪುಸ್ತಕವನ್ನು ನೀವು ಓದುವಾಗ ಕಥೆಯು ಹೇಗೆ ಹೊರಗೆ ಬರುತ್ತದೆ ಎಂಬುದನ್ನು ನೋಡಲು ಅಂತ್ಯದಕಡೆಗೆ ಹಾರುವದನ್ನು ನೀವು ತಡೆದು ಕೊಳ್ಳದಷ್ಟು ಕುತೂಹಲ ಭರಿತರಾಗುವಿರಲ್ಲವೇ! ಅದ್ಭುತಕರವಾದ ಅಂತ್ಯದ ಬಗ್ಗೆ ತಿಳಿದುಕೊಂಡವರಾದ ನೀವು ಓದುವಂತೆ ಸಂಭಾಷಣೆಯಲ್ಲಿ ವಿವರಣೆಯಲ್ಲಿ ಹಾಗೂ ಸಂಬಂಧಗಳಲ್ಲಿ ರಹಸ್ಯವಾಗಿರುವ ಅರ್ಥಗಳನ್ನು ಗ್ರಹಿಸಲು ಪ್ರಾರಂಭಿಸುವಿರಿ. ಮೊದಲೇ ಅಂತ್ಯವನ್ನು ತಿಳಿದುಕೊಂಡಿರುವುದು ನಮಗೆ ತೃಪ್ತಿಯನ್ನು ಕೊಡುವುದು ಆದರೆ ಪುಸ್ತಕದಲ್ಲಿಯ ಪಾತ್ರಗಳು ಅಂತ್ಯವನ್ನು ತಿಳಿದಿರುವದಿಲ್ಲ ಎಂಬುದನ್ನು ಮರೆಯಬಾರದು. ವ್ಯಕ್ತಿಗಳು ಯಾಕೆ ಕೆಲವು ಸಂಗತಿಗಳನ್ನು ಹಾಗೆ ಮಾಡುವರು

ಇಲ್ಲವೇ ಹೇಳುವರು ಎಂಬುದರ ಬಗ್ಗೆ ನಾವು ಆಶ್ಚರ್ಯಪಡುತ್ತೇವೆ. ನಿಶ್ಚಯವಾಗಿಯೂ ಅವರು ಚೆನ್ನಾಗಿ ತಿಳಿಯಬೇಕು ಎನ್ನುತ್ತೇವೆ! ಇಲ್ಲ, ಅದು ಹೀಗೆ ಅಂತ್ಯವಾಗುತ್ತದೆ ಎಂಬುದನ್ನು ಅವರು ತಿಳಿದಿರುವದಿಲ್ಲ.

ಪರಿಶುದ್ಧ ಬರಹಗಳನ್ನು ನಾವು ನೋಡುವಾಗ ಬಹಳವಾದದ್ದನ್ನು ಊಹಿಸುವುದು ಸುಲಭ. ಇಡೀ ಕಥೆಯನ್ನು ತಿಳಿದು ಕೊಳ್ಳುವದರಿಂದ ಆಯ್ಕೆ ಮಾಡಿಕೊಂಡು ನಿಜವಾಗಿಯು ಜೀವಿಸುತ್ತಿರುವ ಇಲ್ಲವೇ ಘಟನೆಗಳನ್ನು ದಾಖಲೆ ಮಾಡುತ್ತಿರುವಲ್ಲಿ ಕೃತ್ಯಗಳ ಮತ್ತು ಮಾತುಗಳ ಮೇಲೆ ನಮ್ಮ ದೃಷ್ಟಿಕೋನವನ್ನು ಮುಂದಿಡುತ್ತೇವೆ.

ಯೇಸುವಿನ ಹಿಂಬಾಲಕರು ಇಲ್ಲವೇ ಆತನ ವಿರೋಧಿಗಳು ಆತನ ಜೀವನದ ಘಟನೆಗಳಲ್ಲಿ ಇಮ್ಮಾನುವೇಲನ - "ದೇವರು ನಮ್ಮೊಂದಿಗೆ ಇದ್ದಾನೆ" ಎಂಬುದರ ಪುರಾವೆಯನ್ನು ನೋಡಲು ಸಿದ್ಧರಾಗಿರಲಿಲ್ಲ. ಯೇಸುವಿನ ಬಗೆಗಿನ ಪೂರ್ಣ ಸತ್ಯದ ವಾಚಕರಂತೆ ನಾವು, ಸತ್ಯವನ್ನು ಮುಂದಾಗಿ ನಿರೀಕ್ಷಿಸದೇ ಇರುವದರಲ್ಲಿ ಜಾಗರೂಕರಾಗಿರಬೇಕು. ಅದು ನಮ್ಮ ಮುಂದೆ ಪ್ರಕಟಿಸಲ್ಪಡಲು ಬಿಡಬೇಕು. ನಾವು ಬೇಕೆಂತಲೇ ಈ ತತ್ವವನ್ನು ಕಡೆಗಣಿಸಬಾರದು. ಸತ್ಯವನ್ನು ಕಾಲ ತುಂಬುವದಕ್ಕಿಂತ ಮೊದಲು ನಿರೀಕ್ಷಿಸುವಂಥದಲ್ಲ ಆದರೆ ಸತ್ಯಕ್ಕೆ ಬರುವುದರ ಲಾಭದ ಬಗ್ಗೆ ಯೇಸು ಮಾತಾಡಿದನು (ಯೋಹಾನು 8:32).

"ಯೆಹೂದ್ಯರ ಅರಸನು," "ಮೆಸ್ಸೀಯನು," ಹಾಗೂ "ದೇವರ ಕುಮಾರನು" ಎಂಬಂಥ ಮಾತುಗಳು, ಯೇಸುವು ದೈವಿಕ ಜೀವಿಯಾಗಿದ್ದಾನೆ ಎಂಬ ಅರ್ಥವನ್ನು ಅನ್ವಯಿಸದೇ ಪ್ರೇರಣೆ ಹೊಂದದ ಜನರಿಂದ ಉಪಯೋಗಿಸಲ್ಪಟ್ಟಿರ ಬಹುದು. ಇಸ್ರಾಯೇಲ್ಯರ ಹಿಂದಿನ ಕಾಲದಲ್ಲಿ ಅರಸರು, ಅಭಿಷಿಕ್ತರು (ಮೆಸ್ಸೀಯರು) ಹಾಗೂ ಒಟ್ಟಾಗಿ ಇಸ್ರಾಯೇಲು ಸಹ "ದೇವರ ಮಕ್ಕಳು" ಎಂದು ದೇವರಿಂದ ಆಯ್ಕೆಯಾದವರಂತೆ ಕರೆಯಲ್ಪಟ್ಟರು.

ಯೇಸುವು ದೇವರ ಕುಮಾರನು ಅಷ್ಟೇ ಅಲ್ಲ, ಕುಮಾರನಾದ ದೇವರೂ ಆಗಿದ್ದನೆಂಬುದಕ್ಕಾಗಿ ಸ್ಪಷ್ಟವಾದ ನಂಬಿಕೆ ಹುಟ್ಟಿಸುವ ಪುರಾವೆಯಾಗಿ ನಾವು ಎಲ್ಲಿಗೆ ಹೋಗೋಣ? ಹೊಸ ಒಡಂಬಡಿಕೆಯ ಬೇರೆ ಬರಹಗಳ ಕಡೆಗೆ ನಾವು ಹೋಗಬಹುದು; ಹಾಗಿದ್ದರೂ ನಮಗೆ ಸುವಾರ್ತೆಗಳು ಮಾತ್ರವೇ ಅವಶ್ಯವಾದವುಗಳಾಗಿವೆ. ಯೇಸುವಿನ ವೈಯಕ್ತಿಕ ಜೀವನ ಹಾಗೂ ಬೋಧನೆಗಳು ಆತನು ನಿಜವಾಗಿಯೂ ದೇವರಾಗಿದ್ದನು ಎಂಬುದನ್ನು ಬಹಿರಂಗ ಪಡಿಸುವವು. ಸುವಾರ್ತೆಯ ವಿವರಗಳ ಕಡೆಗೆ ನೋಡಬಹುದು ಮತ್ತು ಯೇಸುವಿನ ದಿನಗಳಲ್ಲಿ ಇದ್ದವರು ನೋಡಿದ್ದ ಪುರಾವೆಗಳನ್ನು ಕಂಡುಕೊಳ್ಳ ಬಹುದು. ಅವರಿಗಿಂತ ನಾವು ಹೆಚ್ಚು ಆಂತರಿಕ ದೃಷ್ಟಿಯುಳ್ಳವರಾಗಿರುವದರಿಂದ ಅಲ್ಲ ಆದರೆ ಇಡೀ ಹೊಸ ಒಡಂಬಡಿಕೆಯ ಅನಂತರದ ಪ್ರಕಟಣೆಯನ್ನು ಮುನ್ನೋಡುವ ಅವಕಾಶವಿದ್ದುದರಿಂದ ಹೀಗೆ ನೋಡುತ್ತೇವೆ.

## “ವಾಕ್ಯ”

ಖಡ್ಗಕ್ಕಿಂತ ಲೇಖನಿ ಹೆಚ್ಚು ಬಲವುಳ್ಳದ್ದಾಗಿರುವದೆಂಬುದನ್ನು ಚರಿತ್ರೆಯು ತೋರಿಸಿಕೊಟ್ಟಿದೆ, ಮಾತುಗಳು ಸಾಮ್ರಾಜ್ಯಗಳನ್ನು ನಡುಗಿಸಿವೆ, ಯುದ್ಧದಿಂದ ಜನರಿಗೆ ಸ್ವಾತಂತ್ರ್ಯವನ್ನು ಕಾದಿರಿಸಿದೆ ಹಾಗೂ ಚರಿತ್ರೆಯ ಹಾದಿಯನ್ನು ತೀವ್ರವಾಗಿ ಬದಲಾಯಿಸಿವೆ.

“ವಾಕ್ಯ” (word) ಎಂಬುದಕ್ಕೆ ಗ್ರೀಕ್ ಭಾಷೆಯಲ್ಲಿ ಮೂರು ಪದಗಳಾಗಿವೆ. ಒಂದು ಅರ್ಥ ಧ್ವನಿಯ ಸಪ್ಪಳ, ಇನ್ನೊಂದು ಮಾನಸಿಕ ಸ್ಥಿತಿಯನ್ನು ಪ್ರಕಟಿಸುವ ಸಪ್ಪಳ, ಹಾಗೂ ಮೂರನೆಯದು ನಮ್ಮ ಪಠ್ಯದಲ್ಲಿಯ ಪದ ಆಗಿರುತ್ತದೆ. ಅದು ಗ್ರೀಕ್ ಹೊಸ ಒಡಂಬಡಿಕೆಯ ದೊಡ್ಡ ಪದಗಳಲ್ಲಿ ಒಂದಾಗಿರುವುದು - *Logos*. *ಲೋಗೊಸ್* ಎಂಬುದು ವ್ಯಕ್ತಪಡಿಸುವಿಕೆಯ ಭಾವನೆಯನ್ನು, ಜ್ಞಾನವನ್ನು ಒಂದುಗೂಡಿಸುತ್ತದೆ. ಅದರ ಅರ್ಥ ಒಂದು ಪದವು ತನ್ನ ತತ್ವವನ್ನು ಇಲ್ಲವೇ ಭಾವನೆಯನ್ನು ಒಳಗೊಂಡಿರುತ್ತದೆ ಎಂದಾಗುತ್ತದೆ. ಅರ್ಥಗರ್ಭಿತವಾದ ಪದವನ್ನು ಇಂಗ್ಲೀಷ್‌ನಲ್ಲಿ ಸುಲಭವಾಗಿ ಭಾಷಾಂತರಿಸಲಾಗದು. ಮೊಫ್ಫಾಟ ಅವರು ಈ ಪದವನ್ನು ಭಾಷಾಂತರಿಸದೆ ಯೋಹಾನ 1:1ರಲ್ಲಿ ಹೀಗೆ ಇಟ್ಟಿದ್ದಾನೆ: “ಲೋಗೊಸ್ ಪ್ರಾರಂಭದಲ್ಲಿಯೇ ಅಸ್ತಿತ್ವದಲ್ಲಿದ್ದನು. ಲೋಗೊಸ್ ದೇವರೊಂದಿಗಿದ್ದನು, ಲೋಗೊಸ್ ದೇವರಾಗಿದ್ದನು.”

ವಾಕ್ಯವೆಂಬಾತನಂತೆ, ಕ್ರಿಸ್ತನು ಬಾಯಿಮಾತಿನವನಾದ ದೇವರು. “ಪುರಾತನಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯ ದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ” (ಇಬ್ರಿಯ 1:1, 2). ಮಾನವ ಪ್ರವಾದಿಗಳು ಇನ್ನು ಮುಂದೆ ದೈವಿಕ ಸಂದೇಶವನ್ನು ಕ್ರಮೇಣವಾಗಿ ಪ್ರಕಟಿಸಲಾಗದು. ಕ್ರಿಸ್ತನ ಮುಖಾಂತರವಾಗಿ ದೇವರು ಮನುಷ್ಯನಿಗೆ ಹೊಸ ಹಾಗೂ ಜೀವಿಸುವ ಭಾಷೆಯಲ್ಲಿ - ಕ್ರಿಸ್ತನಲ್ಲಿಯ ಜೀವದ ಭಾಷೆಯಲ್ಲಿ ಮಾತಾಡುತ್ತಾನೆ.

ವಾಕ್ಯದಂತೆ, ಕ್ರಿಸ್ತನು ದೃಶ್ಯವಾದ ದೇವರಾದನು. ದೇವರ ವಾಕ್ಯದಂತೆ, ಕ್ರಿಸ್ತನು ದೇವರ ಮನಸ್ಸನ್ನೂ, ಹೃದಯವನ್ನೂ ಪ್ರಕಟಿಸುತ್ತಾನೆ. ಆತನು ರಹಸ್ಯವಾಗಿರುವ, ಶಕ್ತನಾಗಿರುವ, ಅದ್ಭುತಕರನಾದ ಹಾಗೂ ಮಹಿಮೆಯುಳ್ಳ ದೇವರ ಮುಸುಕನ್ನು ತೆರೆಯುತ್ತಾನೆ, ಆತನು ವಿಶ್ವದ ಅನುಭವಾತೀತನಾದ ದೇವರನ್ನು ಮನುಷ್ಯನಿಗೆ ಭೂಲೋಕದಲ್ಲಿ ಅಂತರ್ಯದ ದೇವರನ್ನಾಗಿ ಮಾಡುತ್ತಾನೆ.

*100 Portraits of Christ*
Henry Gariepy

© 2009 Truth for Today